ಹುಡುಕಿಕೊಳ್ಳಬೇಕು. ಇದು ನನ್ನ ನಂಬಿಕೆ. ಉದಾಹರಣೆಗೆ, ಇಬ್ಬರು ಸ್ತ್ರೀಯರನ್ನು ತೆಗೆದುಕೊಳ್ಳೋಣ. ಒಬ್ಬಳು ತನ್ನ ಇಡೀ ಜೀವಮಾನದಲ್ಲಿ ಒಂದೇ ಒಂದು ಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಆ ಮಗು ವೈವಾಹಿಕ ಚೌಕಟ್ಟಿನಾಚೆಗೆ ಜನಿಸಿದ್ದಾಗಿರಬಹುದು. ಈಕೆಯ ಎದುರು ಇನ್ನೊಬ್ಬಳು ನೈತಿಕವಾಗಿಯೇ ಅರ್ಧ ಡಜನ್ ತಂಟೆಕೋರರಿಗೆ ಜನ್ಮ ಕೊಟ್ಟಿದ್ದಾಳೆಂದಿಟ್ಟುಕೊಳ್ಳಿ. ಇವರಿಬ್ಬರಲ್ಲಿ ಯಾರು ಹೆಚ್ಚು ಒಳ್ಳೆಯವರು ಹಾಗೂ ಯಾರು ಹೆಚ್ಚು ನೈತಿಕತೆಯುಳ್ಳವರು? ಮೂವರು ಗಂಡಂದಿರಿಗೆ ವಿಚ್ಛೇದನ ನೀಡಿ ನಾಲ್ಕನೆಯ ಮದುವೆಯಾದ ಹೆಂಗಸು; ತನ್ನ ಮೊದಲ ಮೂವರು ಹೆಂಡತಿಯರು ಒಬ್ಬರ ಹಿಂದೊಬ್ಬರು ತೀರಿಕೊಂಡಿದ್ದರಿಂದ ನಾಲ್ಕನೆಯ ಮದುವೆಯಾದ ಗಂಡಸು – ಈ ಇಬ್ಬರ ನಡುವೆ ಯಾರು ಹೆಚ್ಚು ಸಭ್ಯರು ಹಾಗೂ ಹೆಚ್ಚು ನೈತಿಕತೆಯುಳ್ಳವರು?'

ಭಾರತೀಯ ಮಹಿಳೆಯರ ಸ್ಥಿತಿಯ ಬಗ್ಗೆ ಲೋಹಿಯಾ ಸಾರ್ವಜನಿಕ ಸಭೆಗಳಲ್ಲೂ ಮಾತಾಡುತ್ತಿದ್ದರು; ಸಮುದಾಯವನ್ನು ತಿದ್ದುತ್ತಿದ್ದರು:

'ಭಾರತದ ಬಹುಪಾಲು ಹೆಂಗಸರು ತಮ್ಮ ಮನೆಯ ಗಂಡಸರು ಉಂಡ ಮೇಲೆ ಉಣ್ಣುತ್ತಾರೆ; ಮೊದಲು ಗಂಡಸರಿಗೆ, ಮಕ್ಕಳಿಗೆ, ಅತಿಥಿಗಳಿಗೆ ಊಟಕ್ಕೆ ಬಡಿಸಿ, ಅನಂತರ ತಾವು ಉಣ್ಣುವ ಪರಿಪಾಠ ಇಟ್ಟುಕೊಂಡಿದ್ದಾರೆ. ಈ ಸ್ಥಿತಿಯಲ್ಲಿ ಅವರಿಗೆ ಕೊನೆಗೆ ಉಳಿಯುವುದಾದರೂ ಎಷ್ಟು? ಎಷ್ಟೋ ಕಡೆ ಹೆಂಗಸರು ನೀರು ಕುಡಿದು ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಮಲಗಿಬಿಡುತ್ತಾರೆ ಎಂದು ಕೂಡ ಕೇಳಿದ್ದೇನೆ.'

ಭಾರತೀಯ ಮದುವೆಗಳು ಅಸಮಾನತೆಯ ಮೂಲವಾಗಿರುವುದನ್ನು ಕಂಡಿದ್ದ ಲೋಹಿಯಾ, 'ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಬೇಕು' ಎಂದು 1953ರಲ್ಲೇ ಹೇಳುತ್ತಿದ್ದರು. 1961ರಲ್ಲಿ ನೆಹರು ಸರ್ಕಾರ 'ವರದಕ್ಷಿಣೆ ನಿಷೇಧ ಕಾಯ್ದೆ'ಯನ್ನು ಜಾರಿಗೆ ತಂದಿತು. ಹೀಗೆ ಲೋಹಿಯಾ ಚಿಂತನೆಗಳು ಮುಂದೆ ಕಾಯ್ದೆ, ಕಾನೂನುಗಳ ಮುದ್ರೆಯನ್ನೂ ಪಡೆದವು.

ಕಾಯ್ದೆಗಳಿಂದ ಮಾತ್ರ ಸಮಾಜ ಬದಲಾಗದು ಎಂಬುದು ಲೋಹಿಯಾಗೆ ಗೊತ್ತಿತ್ತು. 'ಅದರ ಜೊತೆಗೆ ಭಾರತೀಯ ಮನಸ್ಸು ಹಾಗೂ ಮೌಲ್ಯಗಳು ಕೂಡ ಬದಲಾಗಬೇಕು' ಎನ್ನುತ್ತಿದ್ದರು:

'ಒಂದು ಫೋಟೋ ನೋಡಿಯೋ ಅಥವಾ ತಲೆತುಂಬ ಸೆರಗು ಹೊದ್ದ ಹುಡುಗಿಯೊಬ್ಬಳು ನಡುಗುತ್ತಾ ಚಹ ಕೊಡುವ ಭಯಮಿಶ್ರಿತ ವಾತಾವರಣದಲ್ಲೋ ನಿರ್ಧರಿಸಲಾದ ಇವತ್ತಿನ ಮದುವೆಗಳು ಹಿಂದಿನ ಕಾಲದಲ್ಲಿ ಕ್ಷೌರಿಕ ಅಥವಾ ಬ್ರಾಹ್ಮಣ ನಡೆಸಿಕೊಡುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದವಾಗಿವೆ. ಈ ಮದುವೆಗಳು ಕೂಡ ಕೊಳ್ಳುವವನೆದುರು ಕುದುರೆಯನ್ನು ತಂದು ನಿಲ್ಲಿಸಿದರೂ ಅದರ ಗೊರಸುಗಳನ್ನು ಮುಟ್ಟಿ ನೋಡದೆ, ಅದರ ಹಲ್ಲುಗಳನ್ನು ಪರೀಕ್ಷಿಸದೆ ಕೊಂಡ ಹಾಗೆಯೇ ಇವೆ.'

ಈ ಚರ್ಚೆಗಳು ಲೋಹಿಯಾ ರಮಾಗೆ ಬರೆದ ಪತ್ರಗಳಲ್ಲೂ ಮುಂದುವರಿಯುತ್ತಿದ್ದವು. ರಮಾ ವಿದೇಶದಲ್ಲಿ ಓದುತ್ತಿದ್ದಾಗ, 'ಇಡೀ ಜಗತ್ತಿನಲ್ಲಿ ಸ್ತ್ರೀಯರನ್ನು ಕನಿಷ್ಠವಾಗಿ ನಡೆಸಿಕೊಳ್ಳುವುದು ಹಾಗೂ ದಬ್ಬಾಳಿಕೆ ಮಾಡುವುದು ಒಪ್ಪಿತ ಮಾರ್ಗವೇ ಆಗಿಬಿಟ್ಟಿರುವುದನ್ನು, ಸೌಂದರ್ಯದ ವಿವಿಧ ಚಿಂತನೆಗಳು ಕೂಡ ಸ್ತ್ರೀದಮನವನ್ನು ಮುಂದುವರಿಸುತ್ತಿರುವುದನ್ನು' ಕುರಿತು ಲೋಹಿಯಾ ಬರೆಯುತ್ತಾರೆ.

ರಮಾ ಮಿತ್ರ ನೇರ ಮಾತಿನ, ದಿಟ್ಟ ವ್ಯಕ್ತಿತ್ವದ ಪ್ರೊಫೆಸರ್ ಆಗಿದ್ದರಲ್ಲಿ ಲೋಹಿಯಾ ಪತ್ರಗಳ ಪ್ರೇರಣೆಯೂ ಇತ್ತು. ಉತ್ತರ ಭಾರತದಲ್ಲಿ ಮೊದಲ ಬಾರಿಗೆ ಸಿಂಹಾಸನ ಏರಿದ ರಜಿಯಾ ಸುಲ್ತಾನರ ಬಗ್ಗೆ ರಮಾರನ್ನು ಮತ್ತೆ ಮತ್ತೆ ಒತ್ತಾಯ ಮಾಡಿ ಸಂಶೋಧನಾ ಲೇಖನ ಬರೆಸಿದ್ದರಲ್ಲಿ ರಮಾ ವ್ಯಕ್ತಿತ್ವವನ್ನು ಗಟ್ಟಿಗೊಳಿಸುವ ಉದ್ದೇಶವೂ ಇತ್ತು. ಪ್ರಿಯಕರನೊಬ್ಬ ಸಖಿಯನ್ನು ಛೇಡಿಸುತ್ತಲೇ ಸ್ವಾವಲಂಬನೆಯತ್ತ ಕರೆದೊಯ್ಯುತ್ತಿದ್ದ ರೀತಿ ಈ ಪತ್ರಗಳಲ್ಲಿದೆ:

'ನಿನ್ನ ಸಮಯವನ್ನೆಲ್ಲ ಸಂಶೋಧನೆಗೆ ಬಳಸುತ್ತಿದ್ದೀಯ ತಾನೆ? ಭಾರತೀಯ ಅಡುಗೆಯನ್ನು ಆಕ್ಸ್‌ಫರ್ಡ್‌ನವರಿಗೆ ಮಾಡಿ ಬಡಿಸುವುದರಲ್ಲೇ ಸಮಯ ಕಳೆಯುತ್ತಿಲ್ಲ ತಾನೇ? ಕಾರ್ ಡ್ರೈವಿಂಗ್ ಕಲಿತುಕೊ. ಸಮಯವಿದ್ದರೆ ಡ್ರೈವಿಂಗ್ ಸ್ಕೂಲಿನಲ್ಲೇ ಕಲಿತು ಲೈಸೆನ್ಸ್ ಪಡೆದುಕೊ.'

ಜೊತೆಗೆ, ಸಂಶೋಧಕಿ ರಮಾಗೆ ಸಲಹೆಗಳೂ ಮುಂದುವರಿಯುತ್ತವೆ:

'ಸಾಮಾಜಿಕ ವಿಷಯಗಳ ಬಗೆಗಿನ ಚಿಂತನೆ ಖಚಿತತೆಯನ್ನೂ ಸೂಕ್ಷ್ಮ ಭಾಷೆಯನ್ನೂ ಅವಲಂಬಿಸಿದೆ. ಬರವಣಿಗೆಯಲ್ಲಿ ಆಗಾಗ್ಗೆ ಆಲಂಕಾರಿಕ ಭಾಷೆಯನ್ನು ಬಳಸುತ್ತೀಯ ಎಂದುಕೊಂಡಿದ್ದೇನೆ; ಆದರೆ ಅದನ್ನೇ ಅಭ್ಯಾಸ ಮಾಡಿಕೊಳ್ಳಬೇಡ... ನಿನ್ನ ಶೈಲಿಯ ಬಗ್ಗೆ ಹೆಚ್ಚಿನ ಎಚ್ಚರ, ಅರಿವು ಬೆಳೆಸಿಕೊಳ್ಳಬೇಕು... ನೀನೆಷ್ಟು ಚೆನ್ನಾಗಿ ಬರೆಯಬಲ್ಲೆ ಎಂಬುದು ನಿನಗೇ ಗೊತ್ತಿಲ್ಲ...'

ಈ ನಡುವೆ ಲೋಹಿಯಾ ತಮ್ಮ ಬಹುದಿನದ ಕನಸಾಗಿದ್ದ ಅಥೆನ್ಸ್‌ನ ಗ್ರೀಕ್ ಸಂಸ್ಕೃತಿ ದರ್ಶನ ಮುಗಿಸಿ ಬರುವ ಹಾದಿಯಲ್ಲಿ ರೋಮ್‌ನಲ್ಲಿ ರಮಾಗೆ ಈಜಿಪ್ಟಿನ ಚಪ್ಪಲಿಯನ್ನು ಕೊಳ್ಳುತ್ತಾರೆ; ಪತ್ರ ಬರೆಯುತ್ತಾರೆ: 'ಈ ಕೆಲಸ ನನಗೆ ಪ್ರಪಂಚದ ಅತ್ಯಂತ ಬಲಾಢ್ಯ ವ್ಯಕ್ತಿಯನ್ನು ಭೇಟಿ ಮಾಡಿದ್ದಕ್ಕಿಂತಲೂ ಹೆಚ್ಚಿನ ತೃಪ್ತಿ ಕೊಟ್ಟಿದೆ.'

* * *

ಸಮಾನತೆಯ ಚಿಂತನೆ ಮೊದಲು ವ್ಯಕ್ತಿಗಳಲ್ಲಿ, ನಂತರ ಸಂಸ್ಥೆಗಳಲ್ಲಿ, ರಾಜಕೀಯ ಪಕ್ಷಗಳ ಮಟ್ಟದಲ್ಲಿ ಹಬ್ಬುತ್ತದೆ; ಕ್ರಮೇಣ ಸಮಾಜದಲ್ಲಿ ಹಬ್ಬುತ್ತದೆ. ಲೋಹಿಯಾ, ಅಂಬೇಡ್ಕರ್ ಥರದ ಚಿಂತಕರು ಆರಂಭಿಸಿದ ಇಂಥ ಪ್ರಕ್ರಿಯೆಗಳ ಮೂಲಕ ಪ್ರಗತಿಪರ ಭಾರತ ಸೃಷ್ಟಿಯಾಗತೊಡಗಿತು. ಅದು ರಾಜಕೀಯ ರಂಗಕ್ಕೂ ಹಬ್ಬತೊಡಗಿತು.

1962ರ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗತೊಡಗಿದವು. ಅಷ್ಟೊತ್ತಿಗಾಗಲೇ ನೆಹರೂರ ನಿಷ್ಠುರ ವಿಮರ್ಶಕರಾಗಿದ್ದ ಲೋಹಿಯಾ, ನೆಹರು ವಿರುದ್ಧ ಫೂಲ್‌ಪುರ್ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ತಯಾರಾದರು. ಇತ್ತ ಮೈಸೂರು ರಾಜ್ಯದಲ್ಲಿ 1957ರ ವಿಧಾನಸಭೆಯಲ್ಲಿ ಚುನಾವಣೆ ಸೋತಿದ್ದ ಶಾಂತವೇರಿ ಗೋಪಾಲಗೌಡರು ಐದು ವರ್ಷ ಹೊಟ್ಟೆಬಟ್ಟೆಗೆ ಕಷ್ಟವಾಗಿದ್ದರೂ ಸಮಾಜವಾದಿ ಪಕ್ಷವನ್ನು ಜೀವಂತವಾಗಿಟ್ಟಿದ್ದರು. ಅವರೂ ಚುನಾವಣೆಗೆ ಸಜ್ಜಾಗುತ್ತಿದ್ದರು.

ಗ್ವಾಲಿಯರ್ ಲೋಕಸಭಾ ಕ್ಷೇತ್ರದಲ್ಲಿ ಗ್ವಾಲಿಯರ್ ಮಹಾರಾಣಿಯನ್ನು ಎದುರಿಸಲು ಒಬ್ಬ ಮಹಿಳೆಯನ್ನೇ ನಿಲ್ಲಿಸಲು ಸಮಾಜವಾದಿ ಪಕ್ಷ ತೀರ್ಮಾನಿಸಿತು. ಅಲ್ಲಿ ಚುನಾವಣಾ ಭಾಷಣ ಮಾಡುತ್ತಾ ಲೋಹಿಯಾ ಹೇಳಿದರು:

'ಸಮಾಜವಾದಿ ಪಕ್ಷವನ್ನು ಶೇಕಡ 99 ದಲಿತ ಜನರ ಪಕ್ಷವನ್ನಾಗಿ ಬೆಳೆಸಬೇಕೆಂದು ನಾನು ಜನತೆಯನ್ನು ಕೇಳಿಕೊಳ್ಳುತ್ತಿದ್ದೇನೆ. ಶೇಕಡ 1ರಷ್ಟಿರುವ, ಇಂಗ್ಲಿಷ್‌ನ ಮೊರೆ ಹೊಕ್ಕ ಶ್ರೀಮಂತರು, ಉಚ್ಚ ಜಾತಿಯವರು ಹಾಗೂ ವಿಶೇಷಾಧಿಕಾರ ಹೊಂದಿದ ಜನ ಭಾರತದ ಜನಸಂಖ್ಯೆಯ ಶೇಕಡ 99ರಷ್ಟು ಜನರನ್ನು ಸದಾ ಜೀತದಾಳುಗಳಂತೆ ನಡೆಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್, ಜನಸಂಘ, ಕಮ್ಯುನಿಸ್ಟ್ ಹಾಗೂ ಪ್ರಜಾ ಸಮಾಜವಾದಿ ಪಕ್ಷದಿಂದ ಹಿಡಿದು ಎಲ್ಲ ಪಕ್ಷಗಳಲ್ಲೂ ಈ ಶೇಕಡ ಒಂದರಷ್ಟಿರುವ ಉಚ್ಚ ವರ್ಗದ ಜನರ ಪ್ರಾಬಲ್ಯವಿದೆ.

'ಇಂಗ್ಲಿಷ್ ಭಾಷೆಯ ಸಾರ್ವಜನಿಕ ಬಳಕೆಯನ್ನು ಶೀಘ್ರವೇ ನಿಲ್ಲಿಸಬೇಕು. ಕೃಷಿ ಹಾಗೂ ಕೈಗಾರಿಕೆಗಳ ಬೆಲೆಗಳ ನಡುವೆ ಸೂಕ್ತ ಸಮತೋಲನ ಸಾಧಿಸಬೇಕು. ವರಮಾನ ಹಾಗೂ ವೆಚ್ಚದ ನಡುವೆ 1:10 ಪ್ರಮಾಣವನ್ನು ಸಾಧಿಸಬೇಕು. ಆರೂವರೆ ಎಕರೆಗಿಂತ ಕಡಿಮೆ ಇರುವ ಹಿಡುವಳಿಗಳ ಮೇಲಿನ ಭೂತೆರಿಗೆಯ ರದ್ದತಿಯಾಗಬೇಕು. ಹಿಂದುಳಿದ ಜನರಿಗೆ ಶೇಕಡ 60 ಸ್ಥಾನಗಳು ದಕ್ಕಬೇಕು...'

'ಈ ಉದ್ದೇಶಗಳಿಗಾಗಿ ಸಮಾಜವಾದಿ ಪಕ್ಷ ಕಂಕಣಬದ್ಧವಾಗಿದೆ' ಎಂದ ಲೋಹಿಯಾ, ಗ್ವಾಲಿಯರ್ ಕ್ಷೇತ್ರದ ಚುನಾವಣೆಯ ಚಾರಿತ್ರಿಕ ಮಹತ್ವವನ್ನು ವಿವರಿಸಿದರು:

'ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ಟಿನ ಮೇಲೆ ಹಿಂದಿನ ಗ್ವಾಲಿಯರ್ ರಾಜ್ಯದ ಮಹಾರಾಣಿ ಸ್ಪರ್ಧಿಸಿದ್ದಾರೆ; ಆಕೆಗೆ ಪ್ರತಿಸ್ಪರ್ಧಿಯಾಗಿರುವವರು ಸಮಾಜವಾದಿ ಪಕ್ಷದ ಜಾಡಮಾಲಿ ಮಹಿಳೆ ಸುಖೋರಾಣಿ. ಸುಖೋರಾಣಿಯವರನ್ನು ಗೆಲ್ಲಿಸುವುದರ ಮೂಲಕ ಗ್ವಾಲಿಯರ್ ಜನತೆ ಅದ್ಭುತವಾದ ಸಾಮಾಜಿಕ, ಆರ್ಥಿಕ ಕ್ರಾಂತಿಯ ನಾಂದಿ ಹಾಡಿ, ದೇಶದ ಚರಿತ್ರೆಗೆ ಉಜ್ವಲ ಪುಟವನ್ನು ಸೇರಿಸಬಹುದು. ಫೂಲ್‌ಪುರ್ ಲೋಕಸಭಾ ಕ್ಷೇತ್ರದಲ್ಲಿ ನೆಹರೂ ಎದುರಿಗಿನ ನನ್ನ ಸ್ವಂತದ ಸ್ಪರ್ಧೆಗಿಂತ ಗ್ವಾಲಿಯರ್‌ನ ಈ ಚುನಾವಣಾ ಹೋರಾಟ ಹೆಚ್ಚು ಮಹತ್ವದ್ದಾಗಿದೆ.'

(ಸಶೇಷ)